ಅಧ್ಯಕ್ಷರು —ಪ್ರಸ್ತಾವ ಏನೆಂದರೆ.

''೧೯೮೭ನೇ ಇಸವಿಯ ಕರ್ನಾಟಕ ವಿಧಾನಮಂಡಲದ ಸಂಬಳ, ನಿವೃತ್ತಿವೇತನ ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು.''

ಪ್ರಸ್ತಾವವು ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡಗಳು–೨ ರಿಂದ ೧೫

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ.

''ಖಂಡಗಳಾದ ೨ ರಿಂದ ೧೫ಗಳು ಎರಡೂ ಸೇರಿದಂತೆ ವಿಧೇಯಕದ ಭಾಗಗಳಾದವು''

ಪ್ರಸ್ತಾವವು ಅಂಗೀಕರಿಸಲ್ಪಟ್ಟಿತು ಮತ್ತು ಖಂಡ ೨ ರಿಂದ ೧೫ರವರೆಗೆ ವಿಧೇಯಕಕ್ಕೆ ಸೇರಿಸಲ್ಪಟ್ಟವು

ಖಂಡ ೧ ಮತ್ತು ಇತರೆ

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ:

''ಖಂಡ ೧, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂಕ್ತ ಸಂಹಿತೆಗಳು ವಿಧೇಯಕದ ಭಾಗವಾಗಿರುತ್ತದೆ.''

ಪ್ರಸ್ತಾವವು ಅಂಗೀಕರಿಸಲ್ಪಟ್ಟಿತು ಮತ್ತು ಖಂಡ ೧ ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂಕ್ತ ಸಂಹಿತೆಗಳಲ್ಲಿ ವಿಧೇಯಕದ ಅಂಗವಾದವು

ಪ್ರಸ್ತಾವದ ಅಂಗೀಕಾರ

ಶ್ರೀ ಎ. ಲಕ್ಷ್ಮೀಸಾಗರ್ (ಸಂಸದೀಯ ವ್ಯವಹಾರಗಳ ಇಲಾಖೆ).—ಸ್ವಾಮಿ, ನಾನು ''೧೯೮೭ನೇ ಇಸವಿಯ ಕರ್ನಾಟಕ ವಿಧಾನ ಮಂಡಲದ ಸಂಬಳ, ನಿವೃತ್ತಿ ವೇತನ ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ ''೧೯೮೭ನೇ ಇಸವಿಯ ಕರ್ನಾಟಕ ವಿಧಾನಮಂಡಲದ ಸಂಬಳ, ನಿವೃತ್ತಿ ವೇತನ ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು.''

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ವಿಧೇಯಕಕ್ಕೆ ಒಪ್ಪಿಗೆ ನೀಡಲಾಯಿತು.

೧೯೮೭ನೇ ಇಸವಿಯ ಕರ್ನಾಟಕ ಸಚಿವರುಗಳ ಸಂಬಳ ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕ

ಶ್ರೀ ಎ. ಲಕ್ಷ್ಮೀಸಾಗರ್ (ಸಂಸದೀಯ ವ್ಯವಹಾರಗಳ ಸಚಿವರು).—ಸ್ವಾಮಿ, ೧೯೮೭ನೇ ಇಸವಿಯ ಕರ್ನಾಟಕ ಸಚಿವರುಗಳ ಸಂಬಳ ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೊರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಎ. ಲಕ್ಷ್ಮೀಸಾಗರ್.—ಸಚಿವರಿಗೆ ಸಂಬಳದ ಹೆಚ್ಚಳವಾಗಿದ್ದು ೧೯೭೮ನೇ ಇಸವಿಯಲ್ಲಿ. ಅಲ್ಲಿಂದ ಇಲ್ಲಿಯವರೆಗೆ ಏನೂ ಹೆಚ್ಚಳವಿಲ್ಲ ಅದೇ ರೀ ಕನ್ವೆಯನ್ಸ್ ಅಲೋಯನ್ಸ್, ೧೯೭೮ರಲ್ಲಿ ನಿಷ್ಕರ್ಷೆಯಾಗಿದ್ದು ಈಗ ಸ್ವಲ್ಪ ಹೆಚ್ಚಳವನ್ನು ಸೂಚಿಸಿದ್ದೇವೆ. ಮಾರ್ಚ್ ೧೯೮೧ರಲ್ಲಿ ಹೆಚ್ಚಿಸಿದ್ದನ್ನು ಈಗ ಸ್ವಲ್ಪ ಹೆಚ್ಚಳವನ್ನು ಸೂಚಿಸಿದ್ದೇವೆ. ಮಾರ್ಚ್ ೧೯೮೧ ರಲ್ಲಿ ಹೆಚ್ಚಿಸಿದ್ದು ದನ್ನು ಈಗ ಹೆಚ್ಚಳ ಮಾಡುತ್ತಿದ್ದೇವೆ. ಅದೇ ರೀತಿ ಸಂಪ್ಟ್ಯುಯರಿ ಅಲೋಯನ್ಸ್ ಪನ್ಕರ್ಷೆ ಮಾಡಿದ್ದು ೧೯೭೮ರಲ್ಲಿ ಎಂಟು ವರ್ಷದಿಂದ ಇದು ಹಾಗೆಯೇ ನಡೆದುಕೊಂಡು ಬರುತ್ತಿದೆ. ಈಗ ಇದನ್ನು ಸ್ವಲ್ಪ ಹೆಚ್ಚಳ ಮಾಡತಕ್ಕಂತಹ ತಿದ್ದುಪಡಿಯನ್ನು ಇದರಲ್ಲಿ ಸೂಚಿಸಿದ್ದೇವೆ. ೧೯೭೮ ರಲ್ಲಿ ಹೌಸ್ ರೆಂಟ್ ಅಲೋಯನ್ಸ್ ಅನ್ನು ನಿಷ್ಕರ್ಷೆ ಮಾಡಿದ್ದು ಅದನ್ನು ಈಗ ಸ್ವಲ್ಪ ಹೆಚ್ಚಿಸಲಾಗಿದೆ. ಯಾರು ಮಂತ್ರಿಗಳು ಮತ್ತು ಮಂತ್ರಿಗಳ ಸ್ಥಾನದಲ್ಲಿರತಕ್ಕಂತಹ ಇತರರು ಯಾರಿದ್ದಾರೆ ಅವರಿಗೆ ಸ್ವಂತ ಮನೆ ಇದ್ದರೆ ಅವರಿಗೆ ಸ್ವಲ್ಪ ಹೌಸ್ ರೆಂಟ್ ಅಲೋಯನ್ಸ್ ಅನ್ನು ಜಾಸ್ತಿ ಮಾಡಿದ್ದೇವೆ. ೧೯೭೮ ರಿಂದ ಮೈಲೇಜ್ ಒಂದನ್ನು ಬಿಟ್ಟರೆ ಮಿಕ್ಕೆಲ್ಲವೂ ಕೂಡ ೧೯೭೮ ರಲ್ಲಿ ನಿಷ್ಕರ್ಷೆಯಾಗಿದ್ದು ಒಂಭತ್ತು ವರ್ಷದ ನಂತರ ಈ ಬದಲಾವಣೆಯನ್ನು ಮಂತ್ರಿಗಳ ಸಂಬಳ ಭತ್ಯೆ ಗಳಲ್ಲಿ ಸೂಚಿಸಿದ್ದೇವೆ. ಮಾನ್ಯ ಮುಖ್ಯ ಮಂತ್ರಿಗಳು ಇಲ್ಲಿಯೇ ಇದ್ದಾರೆ. ಬೇರೆ ರಾಜ್ಯಗಳಲ್ಲಿ ಸೂಚ್ಯವಾಗಿ ಮಾನ್ಯ ಮುಖ್ಯ ಮಂತ್ರಿಗಳಿಗೆ ಸ್ವಲ್ಪ ಸಂಬಳ ಜಾಸ್ತಿ ಮಾಡಿದ್ದೇವೆ. He is first among equal. ಎನ್ನುವ ರೀತಿ ಗೋಸ್ಕರ ಮಾಡಿದ್ದೇವೆ. From Rs. 2,500, we have raised it to Rs. 3000. ೫೦೦ ರೂಪಾಯಿ ಜಾಸ್ತಿ ಅಷ್ಟೇ, ಸೂಚ್ಯವಾಗಿ ಎಂದು ಆಗಲೇ ಹೇಳಿದೆನಲ್ಲಾ. ೧೯೭೮ ರಲ್ಲಿ ಮಾಡಿದಂತಹ ನಿಯಮಾವಳಿಗಳ ತಪ್ಪಸಂಬಂಧವಾಗಿ ಸಂಬಳ ಮತ್ತು ಭತ್ಯೆಗಳನ್ನು ೯ ವರ್ಷಗಳ ನಂತರ ಬದಲಾವಣೆ ಮಾಡುತ್ತಿದ್ದೇವೆ. ಈಗಿನ ಆರ್ಥಿಕ ಪರಿಸ್ಥಿತಿ ಬದಲಾವಣೆಯಾಗಿದೆ ರೂಪಾಯಿನ ಮೌಲ್ಯ ಕಡಿಮೆಯಾಗಿದೆಯೆಂದು ಈಗಾಗಲೇ ಹೇಳಿದ್ದೇನೆ. ಜೀವನಕ್ಕೆ ಸಂಬಂಧಪಟ್ಟ ಎಲ್ಲಾ ವಸ್ತುಗಳ ಬೆಲೆ ಜಾಸ್ತಿಯಾಗಿದೆ ನಾನೊಬ್ಬನೇ ಮಂತ್ರಿಯಾಗಿರುವುದನ್ನು ನೋಡಿ ಎಲ್ಲರ ಬಗ್ಗೆ ಅಳತೆಗೋಲನ್ನು ಹಾಕುವುದು ಬೇಡ ಎನ್ನತಕ್ಕಂತಹ ಮಾತನ್ನು ಈ ಸಮಯದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಕಾಲ, ದೇಶ, ವರ್ತಮಾನಗಳಿಗನುಗುಣವಾಗಿ ನಾವೆಲ್ಲಾ ನಡೆದುಕೊಳ್ಳತಕ್ಕಂತಹ ಸ್ಥಿತಿಯಲ್ಲಿದ್ದೇವೆ ಇದನ್ನು ಮೀರಿ ನಡೆಯುವುದಕ್ಕಾಗುವುದಿಲ್ಲ ಮೀರಿ ನಡೆದರೆ ಹೆಚ್ಚೂ ಕಡಿಮೆಯಾಗಂತ್ತದೆ, ಅಪ್ರಕೃತವಾಗುತ್ತದೆ ಅದು ಸ್ವಾಭಾವಿಕವಾದಂತಹ ನಡತೆಯಾಗುವುದಿಲ್ಲ ಎನ್ನುವಂತಹ ಮಾತನ್ನು ಈಗಾಗಲೇ ಹೇಳಿದ್ದೇನೆ. ಸನ್ಮಾನ್ಯ ಸದಸ್ಯರು ಇದಕ್ಕೆ ಬೆಂಬಲ ಕೊಡಬೇಕೆಂದು ಮನವಿ ಮಾಡುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ.—ನಾನು ಆ ವಾಡಿಕೆಯನ್ನು ಇಟ್ಟಿಲ್ಲ. ವ್ಯಕ್ತಿಗತವಾಗಿ ನಾನಂತೂ ಯಾರ ತಂಟೆಗೂ ಕೂಡ ಹೋಗುವುದಿಲ್ಲ. ೫೫೦ ರೂಪಾಯಿ ಎಂದು ಹೇಳುತ್ತಾರೆ. But the total expenditure on the proposed amendment works out to Rs. 14,83,653. ಒಬ್ಬೊಬ್ಬ ಮಂತ್ರಿಗಳಿಗೆ ಸಾಧಾರಣವಾಗಿ ಒಂದು ಲಕ್ಷ ರೂಪಾಯಿ ಜಾಸ್ತಿ ಖರ್ಚಾಗುತ್ತದೆ. ಇದು ಸ್ವಲ್ಪ ಜಾಸ್ತಿ ಇದನ್ನು ದಯವಿಟ್ಟು ನೋಡಬೇಕು. ಯಾವ ಬೇಸಿಸ್ ಮೇಲೆ ಕೊಟ್ಟಿದ್ದಾರೆಂದು ಹೇಳಿದ್ದರೆ ನಾನು ನೋಡಿಕೊಳ್ಳುತ್ತಿದ್ದೆ ಎರಡು ಸಾರಿ ಪೆಟ್ರೋಲ್ ಬೆಲೆ ರಿವೈಸ್ ಆಗಿದೆ ಮೊನ್ನೆ ಕೂಡ ರಿವೈಸ್ ಆಗಿದೆ. ಇದರಿಂದ ಏನಾಗುತ್ತದೆಂದರೆ ಹೇಗೆ ಲೆಕ್ಕ ಮಾಡಿದರೂ ಕೂಡ ಒಬ್ಬೊಬ್ಬ ಮಂತ್ರಿಗಳಿಗೆ ಒಂದು ಲಕ್ಷ ರೂಪಾಯಿ ಖರ್ಚಾಗುತ್ತದೆ ಇದು ಬಹಳ ಅನ್ಯಾಯ ಇಷ್ಟು ಜಾಸ್ತಿ ಮಾಡಬಾರದಾಗಿತ್ತು. He have wedded to socialism. ಎಂದು ಮಾನ್ಯ ಲಕ್ಷ್ಮೀಸಾಗರ್‌ರವರು ಹೇಳಿದರು, ಅವರಾದರೂ ಇದು ನನಗೆ ಬೇಕಾಗಿಲ್ಲ ಎಂದು ಒಪ್ಪಬಹುದಾಗಿತ್ತು ೧೫ ಲಕ್ಷ ರೂಪಾಯಿ ಜಾಸ್ತಿಯಾಗಿದೆ ಇದನ್ನು ನಾನು ವಿರೋಧ ಮಾಡುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಸನ್ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ವೆಂಕಟರಾಮಯ್ಯನವರು ಯಾವ ಬೇಸಿಸ್ ಮೇಲೆ ಹೇಳಿದರು. ಮಂತ್ರಿಯಾಗಿ ಕಾರು ಇಟ್ಟುಕೊಂಡರೆ ಅವರಿಗೆ ಗೊತ್ತಾಗುತ್ತಿತ್ತು. ಸ್ವಲ್ಪ ದಿವಸ ನನ್ನ ಜೊತೆಯಲ್ಲಿ ಬರಲಿ ಎಷ್ಟು ಖರ್ಚಾಗುತ್ತದೆ ಎಂದು ಅವರಿಗೆ ನಾನು ತೋರಿಸಿ ಕೊಡುತ್ತೇನೆ.

ಅಧ್ಯಕ್ಷರು.—ಅವರಿಗೆ ಗೊತ್ತಿದೆ. ಗೊತ್ತಿದ್ದರು ಹಾಗೆ ಮಾತನಾಡುತ್ತಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ಅದು ಸರಿ ಗೊತ್ತಿದೆ ಎಂದು ತವಗೆ ಗೊತ್ತಾದರೆ ಸಾಕಂ. ನನಗೆ ತೆಗೆದುಕೊಳ್ಳಬೇಡಿ ಎಂದು ಹೇಳುತ್ತಿದ್ದಾರೆ. ನನಗೆ ಬೇಕು ಎಂದು ಹೇಳುತ್ತಿದ್ದೇನೆ. ಅವರ ಹಾಗೆ ನಾನು ಮಿಥ್ಯಾವಾದ ಮಾಡಂವುದಿಲ್ಲ ಮಾನ್ಯ ವೆಂಕಟರಾಮಯ್ಯನವರು ತಿಳಿದುಕೊಳ್ಳಬೇಕು ಅವರಷ್ಟು ಆರ್ಥಿಕವಾಗಿ ಬಲಿಷ್ಠವಾದ ಸ್ಥಿತಿಯಲ್ಲಿ ನಾನಂ ಇಲ್ಲ ಪಕೀಲಿ ಕೆಲಸ ಮಾಡಬೇಕು, ಮಾಸ್ಟರ್ ಕೆಲಸ ಮಾಡಬೇಕು ನನ್ನ ಜೀವನ ಮಾಡಬೇಕಂ. ಅವರು ಮಂನೆಯಲ್ಲಿ ಕುಳಿತುಕೊಂಡಿದ್ದರೆ ಜೀವನ ನಡೆಸತಕ್ಕಂತಹ ಆರ್ಥಿಕ ಸಾಧನ ಸಂಪತ್ತುಗಳನ್ನು ಅವರು ಉಳವಡಿಸಿಕೊಂಡಿದ್ದಾರೆ. ಅದನ್ನು ನಾನು ಹೇಳಿದರೆ ಅವರಿಗೆ ಕೋಪ ಬರುತ್ತದೆ.

ಶ್ರೀ ರಾಮಕೃಷ್ಣ ಹೆಗಡೆ.—ಶ್ರೀಮಂತ ಕಮ್ಯುನಿಸ್ಟರು ಅವರು.

ಶ್ರೀ ಎ. ಲಕ್ಷ್ಮೀಸಾಗರ್.—ಶ್ರೀಮಂತ ಕಮ್ಯುನಿಸ್ಟ್ ಅವರಂ ನಾನಂ ನಿಜವಾದಂತಹ ಕಮ್ಯುನಿಸ್ಟ್. I am a real communist in every sense of the term, I don't own any immovable property,

ಶ್ರೀ ಆರ್. ವೆಂಕಟರಾಮಯ್ಯ.—ಅದಂ ಸತ್ಯಕ್ಕೆ ದೂರವಾದುದು.

4-00 P.M.

SRI A. LAKSHMI SAGAR.— Of course, I own pen, shirt, paper, bag etc. But, he owns moveable and immovable properties.

SRI R. VENKATA RAMAIAH.— Sir, he has got immoveable properties like land etc...

(Interruption)

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.— ಮಾನ್ಯ ವೆಂಕಟರಾಮಯ್ಯನವರಂ ಹೇಳುತ್ತಿರುವುದು ಏನೆಂದರೆ ಅವರಿಗೆ ಪ್ರಾಪರ್ಟಿ ಇದೆ, ಪಾಪ ಅವರು ಕ್ಲೈಮ್ ಮಾಡುತ್ತಿಲ್ಲ ಎಂದು ಹೇಳಿದ್ದಾರೆ. ಇದನ್ನು ಸಮಾಧಾನವಾಗಿ ಅವರಂ ಕೇಳುವುದಕ್ಕೂ ತಯಾರಂ ಇಲ್ಲ.

SRI A. LAKSHMI SAGAR.— I take a challenge and I declare. If you say that I own immoveable properties and prove, I resign from the membership here and now; you show that I am in possession and Ownership of a single piece of land.

SRI MALLIKARJUNA KHARGE.— What he says, you have got the property but you are not claiming.

SRI A. LAKSHMI SAGAR.— That is also wrong. I have no claim over any property. ½ acre of land was there and it was disposed off about 25 years ago. I have no claim what soever on any property. He should know before he opens his mouth.

ಶ್ರೀ ಬಿ.ಎಸ್. ಯಡಿಯೂರಪ್ಪ.— ಅಧ್ಯಕ್ಷರೇ, ಇಲ್ಲಿ ಇರುವಂಥದ್ದು ಶಾಸಕರ ಬಗ್ಗೆ ವಂತ್ತಿಗಳ ಬಗ್ಗೆ ಆಗತ್ಯ ಇರತಕ್ಕದ್ದನ್ನು ಮಾಡಿದ್ದೀರಿ. ತಮ್ಮಲ್ಲಿ ಒಂದು ವಿನಂತಿಯನ್ನು ಮಾಡಿಕೊಳ್ಳತ್ತೇನೆ. ನಮ್ಮ ಹಾಗೆ ಮಾಜಿ ಶಾಸಕರೂ ಇದ್ದಾರೆ, ಒಂದು ಟರ್ಮ್ ಆದವರಿಗೆ ೩೫ರೂಪಾಯಿಗಳನ್ನ ಕೊಡುತ್ತಿದ್ದಾರೆ. ಪಾರ್ಲಿಮೆಂಟಿನಲ್ಲಿ ಒಂದು ಟರ್ಮ್ ಆದವರಿಗೆ ೫೦೦ ರೂಪಾಯಿಗಳನ್ನು ಕೊಟ್ಟು ಮತ್ತೆಪ್ರತಿ ವರ್ಷ ೫೦ ರೂಪಾಯಿಗಳನ್ನು ಜಾಸ್ತಿ ಮಾಡತಕ್ಕದ್ದು ಅದಕ್ಕೆ ಅಮೆಂಡ್‌ಮೆಂಟ್ ಆಗಿದೆ. ಅದು ತವಗೆ ಗೊತ್ತಿರತಕ್ಕಂಥ ಸಂಗತಿ. ಮಾಜಿ ಶಾಸಕರಂ ಒಂದಂ ಸಾರಿ ಬೆಂಗಳೂರಿಗೆ ಬಂದು ಹೋದರೆ ಅವರಿಗೆ ೩೦೦ ರೂಪಾಯಿಗಳು ಖರ್ಚಾಗುತ್ತದೆ ಆದಂದ

ರಿಂದ ಅವರಿಗೆ ಒಂದು ಟರ್ಮ್‌ಗೆ ೫೦೦ ರೂಪಾಯಿಗಳನ್ನು ಕೊಡತಕ್ಕಂಥದ್ದು ಮತ್ತು ಅವರಿಗೆ ಬಸ್‌ಪಾಸ್ ಕೊಡುವ ವ್ಯವಸ್ಥೆ ಮಾಡಿದರೆ ಬಹಳ ಒಳ್ಳೆಯದಾಗುತ್ತದೆ. ಮಾಜಿ ಶಾಸಕರುಗಳ ಹತ್ತಿರ ಸಾವಿರಾರು ಜನ ಕೆಲಸ ಆಗಬೇಕು ಎಂದು ಅವರ ಬೆನ್ನು ಹತ್ತುತ್ತಾರೆ. ಅವರ ಬಗ್ಗೆ ಇಲ್ಲಿ ಮಾತನಾಡಂ ವವರು ಯಾರೂ ಇಲ್ಲದೇ ಇರಬಹುದು ಇವತ್ತಲ್ಲ ನಾಳೆ ನಾವು ಕೂಡಾ ಮಾಜಿ ಶಾಸಕರುಗಳಾಗುತ್ತೇವೆ, ಆದುದರಿಂದ ಅವರಿಗೆ ಒಂದು ಟರ್ಮ್‌ಗೆ ೫೦೦ ರೂಪಾಯಿಗಳು ಎಂದು ಮಾಡುವುದು ಮತ್ತು ಅವರು ಗಳು ಓಡಾಡುವುದಕ್ಕೆ ಬಸ್‌ಪಾಸ್‌ನ ಅನುಕೂಲ ಮಾಡಿಕೊಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿ ಕೊಳ್ಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.— ಈ ಸೂಚನೆಯನ್ನು ಮಾನ್ಯ ಯಡಿಯೂರಪ್ಪನವರು ಹತ್ತು ನಿಮಿಷದ ಮೊದಲು ಮಾಡಿದ್ದರೆ ಅದು ಸಾರ್ಥಕವಾಗುತ್ತಿತ್ತು. ನಮ್ಮ ಪಕ್ಷದ ಅನೇಕ ಸದಸ್ಯರೂ ಕೂಡ ಈ ಸೂಚನೆಯನ್ನು ಮಾಡಿದ್ದಾರೆ. ಈ ವಿಧೇಯಕದಲ್ಲಿ ತಿದ್ದುಪಡಿಯನ್ನು ಯಾರಾದರೂ ತಂದಿದ್ದರೆ ಒಪ್ಪಿಕೊಳ್ಳಬಹುದಾಗಿತ್ತು ಈಗ ಅದು ಪಾಸಾಗಿ ಹೋಯಿತು ಈಗ ಮಾಡಲಿಕ್ಕೆ ಸಾಧ್ಯ ವಿಲ್ಲ. ಇನ್ನು ಮುಂದೆ ಯಾವಾಗ ಅವಕಾಶ ಸಿಗುತ್ತದೆಯೋ ಆವೊತ್ತು ಮಾಡುತ್ತೇವೆ, ಇದ್ದುದರಿಂದ ಒಂದು ತೊಂದರೆಯನ್ನು ನಿವಾರಿಸಿದ್ದೇವೆ. ಇಲ್ಲಿಯವರೆಗೆ ಏನು ಇತ್ತು ಎಂದರೆ ಸೀಲಿಂಗ್ ಇತ್ತು. ಈಗ ಆ ಸೀಲಿಂಗನ್ನು ತೆಗೆದುಹಾಕಿದ್ದೇವೆ. ಅಷ್ಟೇ ಅಲ್ಲ. ೨ ಟರ್ಮ್ ಆದವರಿಗೆ ೨೫೦ ರೂಪಾಯಿ ಗಳನ್ನು ಕೊಡಬಹುದು, ಮೂರು ಟರ್ಮ್ ಆದವರಿಗೆ ೭೫೦ರೂಪಾಯಿಗಳನ್ನು ಕೊಡಬಹುದು ಎಂದು ಮಾಡಿದ್ದೇವೆ. ಇದಕ್ಕೂ ಹೆಚ್ಚು ಇನ್ನೇನಾದರೂ ಸಲಹತ್ತು ಗಳನ್ನು ಕೊಡಬೇಕಾದರೆ ಮುತ್ತೆ ವಿಚಾರ ಮಾಡೋಣ.

ಅಧ್ಯಕ್ಷರು.— ಪ್ರಸ್ತಾವ ಏನೆಂದರೆ, ''ರಿಪೀಲಿನೇ ಇಸವಿಯ ಕರ್ನಾಟಕ ವಿಧಾನ ಮಂಡಲದ ಸಂಬಳ ನಿವೃತ್ತಿ ವೇತನ ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ ೨ ರಿಂದ ೯ರವರೆಗೆ

ಅಧ್ಯಕ್ಷರು.— ಖಂಡ ೨ರಿಂದ ೯ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿ ರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡ ೨ ರಿಂದ ೯ರವರೆಗೆ ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು

ಖಂಡ ೧ ಇತ್ಯಾದಿ

ಅಧ್ಯಕ್ಷರು.— ಪ್ರಸ್ತಾವ ಏನೆಂದರೆ, ''ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗ ವಾಗಿರುತ್ತದೆ.''

ಪ್ರಸ್ತಾವನ್ನು ಅಂಗೀಕರಿಸಲಾಯಿತು

ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು.

ಪ್ರಸ್ತಾವದ ಅಂಗೀಕಾರ

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ವ್ಯವಹಾರಗಳು, ನಗರಾಭಿವೃದ್ಧಿ, ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿ).—ರ್ಗರೆನೇ ಇಸವಿಯ ಕರ್ನಾಟಕ ವಿಧಾನ ಮಂಡಲದ ಸಂಬಳ, ನಿವೃತ್ತಿ ವೇತನ ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ, ''ರ್ಗರೆನೇ ಇಸವಿಯ ಕರ್ನಾಟಕ ವಿಧಾನ ಮಂಡಲದ ಸಂಬಳ ನಿವೃತ್ತಿ ವೇತನ ಮತ್ತು ಭತ್ಯೆಗಳ (ತಿದ್ದುಪಡಿ) ಮಾಡಿರುವಂತೆ ಅಂಗೀಕರಿಸುವುದು.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ, ಯೋಜನೆ ಮತ್ತು ಕಾರ್ಮಿಕ ಮಂತ್ರಿಗಳು).—ಸನ್ಮಾನ್ಯ ಅಧ್ಯಕ್ಷರೇ, ಈಗ ''ರ್ಗರೆನೇ ಇಸವಿಯ ಕರ್ನಾಟಕ ಧಾರ್ಮಿಕ ಕಟ್ಟಡಗಳು ಮತ್ತು ಸ್ಥಳಗಳ ವಿಧೇಯಕವನ್ನು'' ಪರ್ಯಾಲೋಚಿಸಬೇಕಾಗಿದೆ. ಈ ವಿಧೇಯಕದ ವಿಷಯವಾಗಿ ಮಾನ್ಯ ವಿರೋಧ ಪಕ್ಷದ ಸದಸ್ಯರುಗಳ ಜೊತೆ ಚರ್ಚೆ ಮಾಡಿ ಇದನ್ನು ತೆಗೆದುಕೊಳ್ಳಬೇಕಾಗುತ್ತದೆ. ಇದು ಅತ್ಯಂತ ಮಹತ್ವವಾದಂತಹ ಮಸೂದೆ ಆದುದರಿಂದ ಇದನ್ನು ಮುಂದಕ್ಕೆ ಹಾಕಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.— ಈ ಮಸೂದೆಯ ಚರ್ಚೆಯನ್ನು ಮುಂದಕ್ಕೆ ಹಾಕಲಾಗಿದೆ.

The Karnataka Rent Control (Amendment) Bill, 1986; (Reference to Joint Select Committee)

ಶ್ರೀ ಎಸ್. ಆರ್. ಬೊಮ್ಮಾಯಿ.—ಇನ್ನು ಬಾಡಿಗೆ ನಿಯಂತ್ರಣ ಕಾನೂನಿನ ಬಗ್ಗೆ ಈ ಕಡೆ ಮಂತ್ರಿ ಆ ಕಡೆ ಸದಸ್ಯರ ಅಭಿಪ್ರಾಯ. ಇದು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಹಾಕಬೇಕೆಂಬ ಅಭಿಪ್ರಾಯ ಮೂಡಿ ಬಂದಿದೆ. ಆದಕ್ಕಾಗಿ ''ರ್ಗರೆನೇ ಇಸವಿಯ ಕರ್ನಾಟಕ ಬಾಡಿಗೆ ನಿಯಂತ್ರಣ ವಿಧೇಯಕವನ್ನು ೧೨ ಜನ ವಿಧಾನ ಸಭಾ ಸದಸ್ಯರು ಹಾಗೂ ೪ ಜನ ವಿಧಾನ ಪರಿಷತ್ತಿನ ಸದಸ್ಯರು ಹೀಗೆ ಒಟ್ಟು ೧೬ ಜನ ಸದಸ್ಯರುಗಳ ಸದನದ ಸಂಯುಕ್ತ ಪರಿಶೀಲನಾ ಸಮಿತಿಗೆ ಒಪ್ಪಿಸಬೇಕೆಂದೂ ಹಾಗೂ ಅದಕ್ಕಾಗಿ ವಿಧಾನ ಪರಿಷತ್ತಿನ ಒಪ್ಪಿಗೆಯನ್ನು ಪಡೆಯಬೇಕೆಂದೂ ಮತ್ತು ಈ ಕೆಳಕಂಡ ಸದಸ್ಯರು ಸಂಯುಕ್ತ ಪರಿಶೀಲನಾ ಸಮಿತಿಗೆ ಸದಸ್ಯರಾಗಿರುತ್ತಾರೆ.

ಶ್ರೀಯುತರುಗಳಾದ.—

೧ ಪಿ.ಎಂ. ಚಿಕ್ಕಬೋರಯ್ಯ
೨ ಎಂ.ಎಸ್. ನಾರಾಯಣ ರಾವ್
೩ ಎಸ್.ಪಿಚ್. ಕೌಜಲಗಿ
೪ ಎಸ್.ಕೆ. ಕಾಂತಾ
೫ ಶ್ರೀಮತಿ ಡಾ॥ ಎ. ಪುಷ್ಪಾವತಿ
೬ ಮೊಹಮದ್ ಮೊಯುನುದ್ದೀನ್
೭ ಡಿ. ಜಿ. ಬಸವನಗೌಡ
೮ ಡಿ. ನಾಗರಾಜಯ್ಯ
೯ ಸಿ. ಎನ್. ಬಾಸ್ಕರಪ್ಪ
೧೦ ಧರ್ಮಸಿಂಗ್ ನಾರಾಯಣ ಸಿಂಗ್
೧೧ ಕೆ. ಎನ್. ಕೋಳಿವಾಡ್
೧೨ ಬಿ.ಎಂ. ಇದಿನಬ್ಬ